149 ಅಧಿವೇಶನ
ಕ್ರ.ಸ. 27.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಹೇಳಿಕೆ:**

* * *

**ಸೂಚನೆ:**

ಕುಂಬಾರ ಸಮಾಜವು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಅತೀ ಹಿಂದುಳಿದ ಸಣ್ಣ ಸಮಾಜವಾಗಿದೆ, ಜಗತ್ತಿನ ಪುರಾತನ ನಾಗರಿಕತೆಗಳ ಭವ್ಯ ಪರಂಪರೆಯ ಸಾಕ್ಷಿಯಾಗಿ ಈ ಜನಾಂಗ ಮಹತ್ವದ ಪಾತ್ರವಹಿಸಿದ್ದು, ಕುಂಬಾರ ಮಡಿಕೆ ಕುಡಿಕೆಗಳ ನಾಗರಿಕ ಸಮಾಜದ ಪ್ರತೀಕವಾಗಿದೆ.

ಕರ್ನಾಟಕದಲ್ಲಿ ಕುಂಬಾರ, ಚಕ್ರಸಾಲಿ, ಲಿಂಗಾಯತ ಕುಂಬಾರ ಮೂಲ್ಯ ಹಾಡ್ಯ, ಗುನುಗ, ಸಜ್ಜನ ಕುಂಬಾರ, ಪ್ರಜಾಪತಿ, ಶಾಲಿವಾಹನ, ಗುಂಡಾಭಕ್ತ ಹಾಗೂ ಇನ್ನಿತರ ಹೆಸರುಗಳಿಂದ ಕರೆಯಲ್ಪಡುವ ಸಮಾಜವೇ ಕುಂಬಾರ ಸಮಾಜ.

ಈ ಹಿಂದೆ ಕುಂಬಾರ ಸಮಾಜದ ಅಭಿವೃದ್ಧಿಗಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ 'ಕುಂಭ ಕಲಾ ಅಭಿವೃದ್ಧಿ ಮಂಡಳಿ'ಯನ್ನು 2010-11ರಲ್ಲಿ ಸ್ಥಾಪಿಸಲು ಆದೇಶಿಸಿದ್ದರು, ಆದರೆ ದುರದೃಷ್ಟಕರ ಸಂಗತಿ ಎಂದರೆ ಈ ಮಂಡಳಿ ವತಿಯಿಂದ ಇದುವರೆಗೂ ಯಾವುದೇ ಸೌಲಭ್ಯಗಳು ದೊರೆತಿರುವುದಿಲ್ಲ. ಇದರಿಂದ ಈ ಸಮಾಜದವರು ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಹಾಗೂ ಸರ್ಕಾರದ ಸಹಾಯ ಮತ್ತು ಸವಲತ್ತುಗಳು ಸಮರ್ಪಕವಾಗಿ ದೊರಕದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಪ್ರಸ್ತುತ ಸದರಿ ಸಮಾಜದ ಏಳಿಗೆಗಾಗಿ ಹಾಗೂ ಕುಂಬಾರ ಸಮಾಜವು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಸದೃಡಗೊಳಿಸುವ ನಿಟ್ಟಿನಲ್ಲಿ "ಕುಂಭ ಕಲಾ ಮಂಡಳಿ" ಯನ್ನು ಪ್ರತ್ಯೇಕಗೊಳಿಸಿ ಕುಂಬಾರ ಸಮಾಜದ ಏಳಿಗೆಗಾಗಿ ಸ್ವತಂತ್ರವಾಗಿ "ಕುಂಬಾರ ಅಭಿವೃದ್ಧಿ ನಿಗಮ" ವನ್ನು ಘೋಷಿಸಬೇಕೆಂದು ಪ್ರಸ್ತಾಪಿಸಿರುವ ಕುರಿತು.

*****

**ಹೇಳಿಕೆ:**

ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30.03.2002ರಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯ ಪ್ರವರ್ಗ-2ಎ ಕ್ರ.ಸಂ.06 ರಲ್ಲಿ ಕುಂಬಾರ ಹಾಗೂ ಅದರ ಸಮಾನಾಂತರ ಜಾತಿಗಳನ್ನು ಸೇರ್ಪಡೆ ಮಾಡಿ ಶೇ. 15ರಷ್ಟು ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.

ಕುಂಬಾರ ಸಮುದಾಯದ ಫಲಾನುಭವಿಗಳಿಗೆ ಕುಂಭಕಲಾ ಅಭಿವೃದ್ಧಿ ಮಂಡಳಿಯಿಂದ ಸಾಲ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಮುಂದುವರೆದು ಕುಂಬಾರ ಹಾಗೂ ಅದರ ಸಮಾನಾಂತರ ಸಮುದಾಯಗಳು ಸೇರಿದಂತೆ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿಗೆ ಸೇರಿದ ಸಮುದಾಯದವರಿಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು

ಶೈಕ್ಷಣಿಕ ಸಾಲ ಯೋಜನೆ ಹಾಗೂ ತರಬೇತಿ ಯೋಜನೆಗಳಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತಿರುತ್ತದೆ.

ಕುಂಭಕಲಾ ಅಭಿವೃದ್ಧಿ ಮಂಡಳಿಯಿಂದ ಕುಂಬಾರ ಸಮುದಾಯಕ್ಕೆ 2010-11ನೇ ಸಾಲಿನಿಂದ 2019-20ನೇ ಸಾಲಿನ ವರೆಗೆ 13649 ಫಲಾನುಭವಿಗಳಿಗೆ ರೂ.5905.00 ಲಕ್ಷಗಳ ಸಾಲ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. 2020-21ನೇ ಸಾಲಿನಿಂದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಒಟ್ಟಾರೆ ಒದಗಿಸಿದ ಅನುದಾನದಲ್ಲಿ ಕುಂಬಾರ ಜನಾಂಗವು ಸೇರಿದಂತೆ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿಗೆ ಸೇರಿದವರಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ, ಗಂಗಾಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ ಹಾಗೂ ತರಬೇತಿ ಯೋಜನೆಗಳಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಕುಂಬಾರ ಹಾಗೂ ಅದರ ಸಮನಾಂತರ ಸಮುದಾಯಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬೇಡಿಕೆಯನ್ನು ಪರಿಶೀಲಿಸಲಾಗುತ್ತದೆ.

**ಸಂಖ್ಯೆ**:ಹಿಂವಕ 96 ಬಿಸಿಎ 2023

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು